ಓ ಎಸ್ ನಂಃ361/2019
ಪಿ. ಡಬ್ಲ್ಯೂ ಃ 2

ದಿಃ 20.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಂ ವಿ ಎಸ್ ವಕೀಲರಿಂದ ಃ

ವಾದಿಗಳೆಲ್ಲ ನಮ್ಮ ಊರಾದ ಮುತ್ತಯ್ಯನಪಾಳ್ಯದವರು. ಈಗ ನಾನು ಸುಮಾರು 40 ವರ್ಷಗಳಿಂದ ಗುಡೇಮಾರನಹಳ್ಳಿಯಲ್ಲದ್ದೇನೆ. ಮೊದಲು ಮುತ್ತಯ್ಯನಪಾಳ್ಯದಲ್ಲಿದ್ದೆ. ನನ್ನ ಹೆಂಡತಿಯ ಹೆಸರು ನಗೀನಾಬಿ ಇರುತ್ತದೆ. ನಗೀನಾಬಿ ರವರು ವಾದಿ 1 ಮತ್ತು 2 ರವರ ತಂಗಿ. ಇಬ್ರಾಹಿಂ ಸಾಬ್ ಗೆ 4 ಜನ ಗಂಡು ಮಕ್ಕಳು , ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಈ ದಾವೆಯ ವಾದಿಯರು ಸದರಿ 4 ಜನ ಗಂಡು ಮಕ್ಕಳು. ಮತ್ತೊಬ್ಬ ಮಗಳ ಹೆಸರು ಅಸೀನಾ ಆಗಿರುತ್ತದೆ. ನನ್ನ ಪತ್ನಿ ಹಾಗೂ ಮತೊ್ತಬ್ಬ ಹೆಣ್ಣು ಮಗಳು ಈ ದಾವೆಗೆ ಪಕ್ಷಕಾರರಲ್ಲ.

ದಾವಾ ಆಸ್ತಿಗಳ ಸ.ನಂಬರ್ ಹಾಗೂ ಚೆಕ್ ಬಂದಿ ಮತ್ತು ವಿಸ್ತೀರ್ಣ ಹೇಳಲಾಗುವುದಿಲ್ಲ. ನನ್ನ ಮಾವ ಇಬ್ರಾಹಿಂ ಸಾಬ್ ಗೆ 6 ಜನ ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ಇಬ್ರಾಹಿಂ ಸಾಬ್ ನ ತಂದೆಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಇಬ್ರಾಹಿಂ ಸಾಬ್ ನ ಅಣ್ಣ ತಮ್ಮಂದಿರ ಬಗ್ಗೆ ವಿಭಾಗವಾದ ಬಗ್ಗೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ಇಬ್ರಾಹಿಂ ಸಾಬ್ ಹಾಗೂ ಅವರ ಕುಟುಂಬದವರು ಯಾವ ಜಮೀನು ವ್ಯವಸಾಯ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿ. ಮುತ್ತಯ್ಯನಪಾಳ್ಯಕ್ಕೆ ನಾನು ಆಗಾಗ ಹೋಗಿ ಬರುತ್ತೇನೆ. ಮುತ್ತಯ್ಯನಪಾಳ್ಯದಲ್ಲಿ ಇರುವ ನಮ್ಮ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾದಿಗಳ ವಿರುದ್ಧ ಈ ದಾವೆ ಹೂಡಿದ್ದಾರೆ. ಈ ದಾವೆ ಯಾವ ಕಾರಣಕ್ಕಾಗಿ ಹೂಡಿದ್ದಾರೆ ಎಂದುನನಗೆ ತಿಳಿದುಕೊಂಡಿಲ್ಲ,

ಮುತ್ತಯ್ಯನಪಾಳ್ಯದಿಂದ ಗುಡೇಮಾರನಹಳ್ಳಿ 10 ಕಿ.ಮೀಟರ್ ದೂರವಿದೆ. ನನ್ನ ಮುಖ್ಯ ವಿಚಾರಣೆಯನ್ನು ನಾನು ವಕೀಲರಿಗೆ ಮಾಹಿತಿ ಕೊಟ್ಟು ನಾನೇ ಬರೆಯಿಸಿದ್ದೇನೆ. ದಾವಾ ಆಸ್ತಿ ಬಳಿ ನಾನು ದಿನನಿತ್ಯ ಹೋಗುತ್ತೇನೆಂದು ಹೇಳಿ

ಬರೆಯಿಸಿಲ್ಲ. ದಾವಾ ಸ್ವತ್ತಿಗೆ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ, ಆದರೆ 1ನೆ ವಾದಿ ಅದನ್ನು ಅನುಭವಿಸುತ್ತಿದ್ದಾರೆ. ರೆವಿನ್ಯೂ ದಾಖಲೆಗಳು ಯಾರ್ಯಾರ ಹೆಸರಿನಲ್ಲಿವೆ ಎಂದು ನಾನು ನೋಡಿರುವುದಿಲ್ಲ. ಇಬ್ರಾಹಿಂ ಸಾಬ್ ರವರು ತಮ್ಮ ಅಣ್ಣ ತಮ್ಮಂದಿರ ಆಸ್ತಿಯನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 1ನೆ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ವಾದಿಗಳು ಮತ್ತು ಪ್ರತಿವಾದಿಗಳು ತಮಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿ ಗಂಡನಿಗೆ ಮತ್ತು 1ನೆ ವಾದಿಯ ತಂದೆಗೆ ವಿಭಾಗದಲ್ಲಿ ಬಂದ ಹಿಸ್ಸೆ ಜಮೀನಿನಲ್ಲಿ ಅವರವರೇ ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

ಇಬ್ರಾಹಿಂ ಸಾಬ್ ರವರು ತೀರಿಕೊಂಡ ನಂತರ ಅವರ ಮಕ್ಕಳು ಅವರ ಆಸ್ತಿಯನ್ನು ಅಂದರೆ ವಾದಿಗಳು ಜಮೀನನ್ನು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 1ನೆ ಪ್ರತಿವಾದಿ ಗಂಡ ರವರು ತೀರಿಕೊಂಡ ನಂತರ 1ನೆ ಪ್ರತಿವಾದಿ ಅವರ ಆಸ್ತಿಯಲ್ಲಿ ಜಮೀನನ್ನು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಇಬ್ರಾಹಿಂ ಸಾಬ್ ಮತ್ತು 1ನೆ ಪ್ರತಿವಾದಿ ಗಂಡ ಪೌತಿಯಾದ ನಂತರ ರೆವಿನ್ಯೂ ದಾಖಲೆಗಳು ಅವರವರ ವಾರಸುದಾರರ ಹೆಸರಿಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಇಬ್ರಾಹಿಂ ಸಾಬ್ ಗೆ ಬರೆದುಕೊಟ್ಟ ಕ್ರಯಪತ್ರವನ್ನು ನಾನು ನೋಡಿ ಓದಿದ್ದೇನೆ. ಅದು ಯಾವ ವರ್ಷ ಮತ್ತು ಯಾವ ಆಸ್ತಿಗೆ ಸಂಬಂಧಿಸಿದೆಂದು ಹೇಳಲಾಗುವುದಿಲ್ಲ, ಆನಂತರ ಇಬ್ರಾಹಿಂ ಸಾಬ್ ರವ ಕುಟುಂಬದಲ್ಲಿ ವಿಭಾಗವಾಗಿತ್ತು ಎಂದರೆ ಸರಿ.

3ನೆ ವಾದಿ ಈ ಮೊದಲು ದಾವೆ ಸಲ್ಲಿಸಿದ್ದು ಈಗ ಅದು ವಜಾವಾಗಿದೆ ಎಂದರೆ ಸರಿ. ಅದೇ ರೀತಿ ಎ ಸಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ದಾವೆಯೂ ಕೂಡ ವಜಾವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ 1ನೆ ಪ್ರತಿವಾದಿಯ ಆಸ್ತಿಯನ್ನು ಸೇರಿಸಿ ದಾವೆ ಹಾಕಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ದಾವೆ ಯಾವ ಆಸ್ತಿಗೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿಯ ಆಸ್ತಿಯನ್ನು ಸೇರಿಸಿ ಈ ದಾವೆ ಹಾಕಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲದೆ ಇದ್ದರೂ ಸಹ ವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1ನೆ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ವಾದಿ ಮತ್ತು ಪ್ರತಿವಾದಿಗಳು ಅವರವರ ಭಾಗಕ್ಕೆ ಬಂದ ಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

ಮರುವಿಚಾರಣೆ ಃ ಇಲ್ಲ

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ

ಮಾಗಡಿ.